ಓ ಎಸ್ ನಂಃ 336-19
ಪಿ ಡಬ್ಲ್ಯೂ ಃ 1

ದಿಃ 03-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ

26. ನಾನು ವಾದಿಗಳ ಮುತ್ತಾತರವರಾದ ಮಸ್ತಾನ್ ಸಾಬ್ ರವರನ್ನು ನೋಡಿರುವುದಿಲ್ಲ. ನನಗೆ ಸೇರಿದ ಸ್ವತ್ತುಗಳು ಯಾವುದು ದಾವಾ ಸ್ವತ್ತುಗಳ ಸುತ್ತಮುತ್ತ ಮತ್ತು ಹೊಸಹಳ್ಳಿ ಗ್ರಾಮದಲ್ಲಿ ಇರುವುದಿಲ್ಲ. ಸರ್ವೆ ನಂ 28 ರಲ್ಲಿ 3 ಎಕರೆ 22 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ 4 ಗುಂಟೆ ಖರಾಬು ಇರುತ್ತದೆ. ಸದರಿ ಜಮೀನಿನಲ್ಲಿ 3 ಎಕರೆ 18 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ್ 28 ರಲ್ಲಿ ಎಷ್ಟು ಪೋಡಿ ಆಗಿ ಹೊಸ ಸರ್ವೆ ನಂಬರುಗಳನ್ನು ಕೊಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ವಾದಿಗಳ ಕುಟುಂಬಕ್ಕೆ ಅಂದರೆ ರಿಯಾಜ್ ಉಲ್ಲಾ ರವರ ಕುಟುಂಬಕ್ಕೆ ಸರ್ವೆ ನಂ 25 ಮತ್ತು 26 ಜಮೀನುಗಳು ಸರ್ವೆ ನಂಬರ್ 28 ರೊಂದಿಗೆ ಇರುತ್ತದೆ. ಸರ್ವೆ ನಂ 25 ರಲ್ಲಿ 35 ಗುಂಟೆ ಜಮೀನು ಇದ್ದು ಅದರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬೇರೆಯವರ ಗದ್ದೆಗಳು, ಉತ್ತರಕ್ಕೆ ವಾದಿಗಳ ಜಮೀನು, ದಕ್ಷಿಣಕ್ಕೆ ಗ್ರಾಮಠಾಣ ಮನೆಗಳು ಇರುತ್ತವೆ. ಸರ್ವೆ ನಂ 26 ರಲ್ಲಿ ಒಟ್ಟು 36 ಗುಂಟೆ ಜಮೀನು ಇದ್ದು ಅದರ ಪೂರ್ವಕ್ಕೆ ವಾದಿಗಳ ಜಮೀನು, ಪಶ್ಚಿಮಕ್ಕೆ ರಸ್ತೆ ಮತ್ತು ಖರಾಬು, ಉತ್ತರಕ್ಕೆ ವಾದಿಗಳ ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸರ್ವೆ ನಂ 25 ಅಲಿಜಾನ್ ಹೆಂಡತಿಯವರ ಹೆಸರಿನಲ್ಲಿ ಖಾತೆ ಇರುತ್ತದೆ ಅವರ ಹೆಸರು ಗೊತ್ತಿಲ್ಲ. ಸರ್ವೆ ನಂ 26 ರಿಯಾಜ್ ಉಲ್ಲಾರವರ ಹೆಸರಿನಲ್ಲಿರುತ್ತದೆ. ವಾದಿಗಳ ಕುಟುಂಬದಲ್ಲಿ ದಾನಪತ್ರ, ಕ್ರಯಪತ್ರ ಮತ್ತು ಇತರೆ ದಾಖಲಾತಿಗಳನ್ನು ಮಾಡಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಾದಿಗಳ ಮುತ್ತಾತರವರಿಗೆ ದಾವಾ ಸ್ವತ್ತುಗಳು ಯಾವ ರೀತಿ ಬಂದಿರುತ್ತವೆ ಎಂದರೆ ಅದು ಪಿತ್ರಾರ್ಜಿತ ಸ್ವತ್ತು ಎಂದು ಹೇಳುತ್ತಾರೆ.

27. ದಾವೆಯಲ್ಲಿ ತಿಳಿಸಿರುವ ಜುಬಾನೆ ವಿಭಾಗ ಆಗುವಾಗ ನಾನು ಇರಲಿಲ್ಲ. ವಾದಿಗಳ ಮುತ್ತಾತ ಮಸ್ತಾನ್ ಸಾಬ್ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮಸ್ತಾನ್ ಸಾಬ್ ರವರ ಹೆಂಡತಿಯ ಹೆಸರು ಕುಲ್ಸುಂಬಿ ಅವರನ್ನು ನಾನು ನೋಡಿರುವುದಿಲ್ಲ. ಅವರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮಸ್ತಾನ್ ಸಾಬ್ ರವರಿಗೆ ಇಬ್ಬರು ಮಕ್ಕಳಿದ್ದು ಮೊದಲನೇ ಮೊಹಿದ್ದಿನ್ ಸಾಬ್, 2 ನೇ ಸತ್ತಾರ್ ಸಾಬ್ ಆಗಿರುತ್ತದೆ. ನಾನು ಸದರಿ ದಾವೆಯಲ್ಲಿ 2 ನೇ ಮಗ ಸತ್ತಾರ್ ಸಾಬ್ ರವರ ಬಗ್ಗೆ ಬರೆಸಿರುತ್ತೇನೆ. ಮಸ್ತಾನ್ ಸಾಬ್ ರವರು ಬಾಯಿ ಮಾತಿನಲ್ಲಿ ಸದರಿ ಇಬ್ಬರು ಮಕ್ಕಳಿಗೆ ವಿಭಾಗ ಯಾವ ದಿನಾಂಕ ಮಾಡಿರುತ್ತಾರೆ ಗೊತ್ತಿಲ್ಲ. ಸದರಿ ಬಾಯಿಮಾತಿನಲ್ಲಿ ವಿಭಾಗ

ಮಾಡಿಕೊಂಡಿರುವುದಕ್ಕೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ನಾನು ಸದರಿ ಜುಬಾನೆ ವಿಭಾಗವನ್ನು ತೋರಿಸಲು ಎಂ ಆರ್ ಪ್ರತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ಜುಬಾನೆ ವಿಭಾಗ ಸುಮಾರು 50-60 ವರ್ಷಗಳ ಹಿಂದೆ ಆಗಿರಬಹುದು. ನಾನು 50-60 ವರ್ಷಗಳ ಹಿಂದಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸುಮಾರು 50-60 ವರ್ಷಗಳ ಹಿಂದೆ ಜುಬಾನೆ ವಿಭಾಗ ಆಗಿರುವುದನ್ನು ನೋಡಿರುವ ವ್ಯಕ್ತಿಗಳು ಈಗಲೂ ಇರುತ್ತಾರೆ. ನಾನು ಯಾವುದೋ ಒಂದು ದಿನ ಹೊಸಹಳ್ಳಿಗೆ ಹೋಗುವುದರಿಂದ ಸದರಿ ಆ ವ್ಯಕ್ತಿಗಳ ಹೆಸರು ಗೊತ್ತಿರುವುದಿಲ್ಲ. ಸದರಿ ವಿಭಾಗದ ಬಗ್ಗೆ ಕಂದಾಯ ದಾಖಲಾತಿಗಳು ಆಗಿರುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ. ನಾನು ಸತ್ತಾರ್ ಸಾಬ್ ಮತ್ತು ಮೊಹಿದ್ದೀನ್ ಸಾಬ್ ರವರ ಹೆಸರಿಗೆ ಕಂದಾಯ ದಾಖಲಾತಿಗಳು ಬಂದಿರುವುದಕ್ಕೆ ನ್ಯಾಯಾಲಯಕ್ಕೆ ಕಂದಾಯ ದಾಖಲಾತಿಗಳನ್ನು ಕೊಟ್ಟಿರುತ್ತೇನೆ.

28. ಮಸ್ತಾನ್ ಸಾಬ್ ರವರು ಮಕ್ಕಳು ಯಾವ ದಿನ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಮೊಹಿದ್ದೀನ್ ಸಾಬ್ ರವರಿಗೆ ಸರ್ವೆ ನಂ 28 ರಲ್ಲಿ 1 ಎಕರೆ 03 ಗುಂಟೆ ಕೊಟ್ಟಿರುತ್ತಾರೆ. ಅದೇ ರೀತಿ ಸತ್ತಾರ್ ಸಾಬ್ ರವರಿಗೆ ಸರ್ವೆ ನಂ 28 ರಲ್ಲಿ 2 ಎಕರೆ 15 ಗುಂಟೆ ಕೊಟ್ಟಿರುತ್ತಾರೆ. ನಾನು ಸದರಿ ವಿಸ್ತೀರ್ಣಕ್ಕೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸರ್ವೆ ನಂ 26 ರಲ್ಲಿ ತಲಾ 18 ಗುಂಟೆ ಅವರಿಗೆ ನೀಡಲಾಗಿತ್ತು. ಅದರ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

29. ಪ್ರಸ್ತುತ ಸಾಲಿನಲ್ಲಿ ಮೇಲೆ ಹೇಳಿದ ಸರ್ವೆ ನಂ 26 ಮತ್ತು 28 ರ ಪಹಣಿಗಳು ಅಲಿಜಾನ್ ರವರ ಹೆಸರಿನಲ್ಲಿರುತ್ತದೆ. ಅಲಿಜಾನ್ ರವರ ತಂದೆಯ ಹೆಸರು ಸತ್ತಾರ್ ಸಾಬ್. ಸತ್ತಾರ್ ಸಾಬ್ ರವರಿಗೆ ಇಬ್ಬರು ಮಕ್ಕಳು ಅವರು 1 ನೇ ಅಲಿಜಾನ್ ಮತ್ತು 2 ನೇ ಅಮೀರ್ ಜಾನ್ ಆಗಿರುತ್ತಾರೆ. ಸದರಿ ಅಲಿಜಾನ್ ಮತ್ತು ಅಮೀರ್ ಜಾನ್ ರವರು 1967 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. 1967 ರಿಂದ ಸದರಿಯವರ ಹೆಸರಿಗೆ ಖಾತಾ ಪಹಣಿ ಇರುತ್ತವೆ. 1967 ನೇ ಇಸವಿಯಲ್ಲಿ ಆಗಿರುವ ವಿಭಾಗಪತ್ರಕ್ಕೆ ನಾನು ಸಾಕ್ಷಿ ಹಾಕಿರುವುದಿಲ್ಲ, ಆದರೆ ಆಗಿರುವುದು ಗೊತ್ತು. ಆದರೆ ನಾನು 1967 ರಲ್ಲಿ ಪತ್ರವಾದಾಗ ಹಾಜರು ಇರಲಿಲ್ಲ. 1967 ನೇ ಇಸವಿಯಲ್ಲಿ ಆದಂತಹ ವಿಭಾಗ ಪತ್ರವನ್ನು ಯಾರು ಬರೆದಿರುತ್ತಾರೆ ಯಾರು ಸಾಕ್ಷಿ ಹಾಕಿರುತ್ತಾರೆ ಗೊತ್ತಿಲ್ಲ. 1967 ನೇ ಇಸವಿಯಲ್ಲಿ ಆಗಿರುವ ವಿಭಾಗ ಪತ್ರ ನೊಂದಣಿಯಾಗಿರುವುದಿಲ್ಲ.

30. ನಾನು ನನ್ನ ದಾವೆಯಲ್ಲಿ ಹೇಳಿರುವ ಹಕ್ಕು ನಿವೃತ್ತಿ ಪತ್ರ 1984 ರಲ್ಲಿ ಆಗಿರುತ್ತದೆ. ನಾನು ಸದರಿ ಹಕ್ಕು ನಿವೃತ್ತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1984 ರಲ್ಲಿ ಆಗಿರುವ ಹಕ್ಕು ನಿವೃತ್ತಿ ಪತ್ರದ ಬಗ್ಗೆ ನನಗೆ ಕಳೆದ 30 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಸದರಿ ಹಕ್ಕು ನಿವೃತಿ ಪತ್ರ ಅಲಿಜಾನ್ ರವರ ಹತ್ತಿರ ಇತ್ತು. ಸದರಿ ಹಕ್ಕು ನಿವೃತ್ತಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸದರಿ ಪತ್ರಕ್ಕೆ ಸಾಕ್ಷಿ ಹಾಕಿರುವುದಿಲ್ಲ ಮತ್ತು ಸದರಿ ಪತ್ರ ಆಗುವಾಗ ನಾನು ಇರಲಿಲ್ಲ. 1984 ರಲ್ಲಿ ಯಾವುದೇ

ಹಕ್ಕು ನಿವೃತ್ತಿ ಆಗಿರುವುದಿಲ್ಲ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1972 ನೇ ಇಸವಿಯಲ್ಲಿ ಮತ್ತೊಂದು ಹಕ್ಕು ನಿವೃತ್ತಿ ಪತ್ರವನ್ನು ಅಮೀರ್ ಜಾನ್ ರವರು ಅಲಿಜಾನ್ ರವರಿಗೆ ಕೊಟ್ಟಿರುತ್ತಾರೆ. ಸದರಿ ಪತ್ರ ದಿನಾಂಕಃ 31-10-1972 ರಂದು ಆಗಿರುತ್ತದೆ. ಸದರಿ ಪತ್ರವನ್ನು ಬರೆಯುವಾಗ ನಾನು ಹಾಜರಿರಲಿಲ್ಲ ಮತ್ತು ಸಾಕ್ಷಿ ಹಾಕಿರಲಿಲ್ಲ. ನಾನು ಸದರಿ ಪತ್ರವನ್ನು 2012 ನೇ ಇಸವಿಯಲ್ಲಿ ನೋಡಿರುತ್ತೇನೆ. ನಾನು ಈ ಪ್ರಕರಣಕ್ಕೆ ಸಂಬಂದಪಟ್ಟ ಎಲ್ಲಾ ದಾಖಲಾತಿಯನ್ನು 2012 ನೇ ಇಸವಿಯಲ್ಲಿ ನೋಡಿರುತ್ತೇನೆ. ದಾವಾ ಸ್ವತ್ತುಗಳು ಈ ಹಿಂದೆ ಎಲ್ಲಾ ದಾಖಲಾತಿಗಳನ್ನು ಮಾಡುವ ಸಂದರ್ಭದಲ್ಲಿ ಅಳತೆ ಮಾಡಿರುವ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾ ಸರ್ವೆ ನಂ 28 ರಲ್ಲಿ ಯಾರು ಒತ್ತುವರಿ ಮಾಡಿರುವುದಿಲ್ಲ. ಸರ್ವೆ ನಂ 28 ರಲ್ಲಿ ಸರ್ವೆ ಮಾಡಿದರೆ ಯಾರು ಎಷ್ಟು ಜಮೀನಿನ ಕಬ್ಜೆಯಲ್ಲಿರುತ್ತಾರೆಂದು ಗೊತ್ತಾಗುತ್ತದೆ ಎಂದರೆ ಸರಿ. ನಾನು ದಾವೆಯನ್ನು ಹೂಡುವ ಮೊದಲು ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿ.

31. ಅಮೀರ್ ಜಾನ್ ರವರು ಅಲಿಜಾನ್ ರವರಿಗೆ ಸರ್ವೆ ನಂ 26 ಮತ್ತು 28 ರಲ್ಲಿ 1 ಎಕರೆ 07 ಗುಂಟೆ ಜಮೀನಿಗೆ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅಲಿಜಾನ್ ರವರ ಹೆಸರಿಗೆ ಮೇಲೆ ಹೇಳಿದಂತೆ ಕಂದಾಯ ದಾಖಲಾತಿಗಳು ಬಂದಿರುವುದಿಲ್ಲ. ಅಲಿಜಾನ್ ರವರ ಹೆಸರಿಗೆ 1984 ರಲ್ಲಿ ಬರೆದುಕೊಟ್ಟಿರುವ ಹಕ್ಕುನಿವೃತ್ತಿ ಪತ್ರದಂತೆ ಕಂದಾಯ ದಾಖಲಾತಿಗಳು ಆಗಿರುತ್ತದೆ. ಅಲಿಜಾನ್ ರವರ ಹೆಸರಿಗೆ ಎಲ್ಲಾ ದಾಖಲಾತಿಗಳು ಬಂದಿರುತ್ತವೆಯೇ ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳು ಸರಿಯಾಗಿ ನಮೂದಾಗಿರುವುದಿಲ್ಲ ಎಂದು ನುಡಿಯುತ್ತಾರೆ ಮತ್ತು ಮುಂದುವರೆದು ಸರ್ವೆ ನಂಬರ್ ಸರಿಯಾಗಿದ್ದು ವಿಸ್ತೀರ್ಣ ಸರಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ.

32. ಅಮೀರ್ ಜಾನ್ ರವರು ಹಕ್ಕು ನಿವೃತ್ತಿ ಪತ್ರ ಬರೆದುಕೊಡುವಾಗ ಕಂದಾಯ ದಾಖಲಾತಿಗಳು ಅಮೀರ್ ಜಾನ್ ರವರ ಹೆಸರಿನಲ್ಲಿ 1972 ಮತ್ತು 1984 ರಲ್ಲಿ ಸರಿಯಾಗಿರಲಿಲ್ಲ. ಅಮೀರ್ ಜಾನ್ ರವರ ಹೆಸರಿನಲ್ಲಿ ಖಾತೆ ಪಹಣಿ ಬಂದಿರುವುದಿಲ್ಲ ಎಂದರೆ 2012 ರ ಈಚೆಗೆ ನಾನು ನೋಡಿದ್ದು ಅದರಲ್ಲಿ ಬಂದಿರುತ್ತದೆ. ಆದರೆ 2012 ಹಿಂದಿನ ದಾಖಲಾತಿಗಳು ಬಂದಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಮೀರ್ ಜಾನ್ ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಅಮೀರ್ ಜಾನ್ ರವರಿಗೆ ಮೂರು ಜನ ಮಕ್ಕಳು. ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಅಮೀರ್ ಜಾನ್ ರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಅಮೀರ್ ಜಾನ್ ರವರು ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇದ್ದಿದ್ದು ಮತ್ತು ವ್ಯವಸಾಯ ಮಾಡಿರುವುದನ್ನು ನಾನು ನೋಡಿರುತ್ತೇನೆ. ನಾನು ಅಮೀರ್ ಜಾನ್ ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1984 ರಲ್ಲಿ ಅಮೀರ್ ಜಾನ್‌ರವರು ಅಲಿಜಾನ್ ರವರಿಗೆ ಯಾವುದೇ ಹಕ್ಕು ನಿವೃತ್ತಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

ಅಮೀರ್ ಜಾನ್ ಮತ್ತು ಅಲಿಜಾನ್ ರವರ ಹೆಸರಿನಲ್ಲಿ 1972 ರಲ್ಲಿ ಒಂದು ಕ್ರಯಪತ್ರ ಆಗಿರುತ್ತದೆ. ಸದರಿ ಕ್ರಯಪತ್ರವನ್ನು ಅಮೀರ್ ಜಾನ್ ರವರು ಅಲಿಜಾನ್ ರವರಿಗೆ ಸರ್ವೆ ನಂ 26 ರಲ್ಲಿ 18 ಗುಂಟೆ ಜಮೀನು ಮತ್ತು ಸರ್ವೆ ನಂ 28 ರಲ್ಲಿ 1 ಎಕರೆ 1 ಎಕರೆ 7 1/2 ಗುಂಟೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಸಮಯದಲ್ಲಿ ದಾವಾ ಸ್ವತ್ತುಗಳಿಗೆ ಕಂದಾಯ ದಾಖಲಾತಿಗಳು ಇದ್ದವೋ ಇಲ್ಲವೊ ಗೊತ್ತಿಲ್ಲ. 1972 ರ ಕ್ರಯಪತ್ರ ಆದ ನಂತರ ಕಂದಾಯ ದಾಖಲಾತಿಗಳು ಬದಲಾವಣೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1972 ರಲ್ಲಿ ತಿಳಿಸಿರುವ ಸ್ವತ್ತುಗಳು ಮತ್ತು 1984 ರಲ್ಲಿ ಹಕ್ಕುನಿವೃತ್ತಿ ಪತ್ರದಲ್ಲಿ ತಿಳಿಸಿರುವ ಪತ್ರ ಒಂದೇ ಆಗಿರುತ್ತದೆ. ಸದರಿ ಎರಡು ದಾಖಲಾತಿಗಳು ಅಲಿಜಾನ್ ಮತ್ತು ಅಮೀರ್ ಜಾನ್‌ರವರಲ್ಲಿ ಅಪನಂಬಿಕೆಯಿಂದ ಆಗಿದ್ದರಿಂದ ಆಗಿರುತ್ತದೆ. ಸದರಿ ದಾಖಲಾತಿಗಳ ಮೇಲೆ ಇಲ್ಲಿಯವರೆಗೂ ಅಲಿಜಾನ್ ರವರ ಹೆಸರಿಗೆ ದಾಖಲಾತಿಗಳು ಆಗಿರುವುದಿಲ್ಲ ಎಂದರೆ ಸರಿ. ಅಮೀರ್ ಜಾನ್ ರವರು ಯಾವ ದಿನವೂ ಸ್ವಾಧೀನದಲ್ಲಿರುವುದಿಲ್ಲ ಮತ್ತು ಅವರು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಸ್ವಾಧೀನದಲ್ಲಿರುವುದನ್ನು ನಾನು ನೋಡಿರುತ್ತೇನೆ.

33. 2007 ನೇ ಇಸವಿಯಲ್ಲಿ ಅಲಿಜಾನ್ ರವರು ತೀರಿಕೊಂಡಾಗ ಅವರ ಹೆಸರಿಗೆ ಕಂದಾಯ ದಾಖಲಾತಿಗಳು ಇತ್ತು ಮತ್ತು ಅವರು ಯಾರಿಗೂ ತೋರಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**